**ಸಿ.ಸಿ ನಂಃ 454/2022**

ಡಿ ಡಬ್ಲುಃ 02

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪಿರ್ಯಾದಿ ಪರ ವಕೀಲರಿಂದಃ**

ಶಿರಸಿಯ ಶಿವಯೋಗಿ ಹಂದ್ರಾಳ ಇವರ ಹತ್ತಿರ ನಾವು ದಾಸನಕೊಪ್ಪದ ಬಸವರಾಜ ನಂದಿಕೇಶ್ವರಮಠದಿಂದ ಹೋಗಿದ್ದೇವು. ಯಾವ ತಾರೀಖಿನಂದು ನಾವು ಹೋಗಿದ್ದೇವು ಎಂದರೆ, 2019 ರಲ್ಲಿ ನಮ್ಮ ಮಾವನವರಿಗೆ ಸಮಸ್ಯಯಾದಾಗ ಹೋಗಿದ್ದೇವು ಎಂದು ನುಡಿಯುತ್ತಾರೆ. ನಾವು ಬಸ್ಸಿನಲ್ಲಿ ಹನುಮಂತಪ್ಪ ಭಜಂತ್ರಿಯವರೊಂದಿಗೆ ಹೋಗಿದ್ದೇವು. ನಮ್ಮ ಅಣ್ಣ ಕಾರಿನಲ್ಲಿ ಬಂದರು. ನಾವು ಬಸ್ಸಿನಲ್ಲಿ ಪ್ರಯಾಣಿಸಿದ್ದಲ್ಲಿ, ಟಿಕೇಟ್ ಇರುತ್ತದೆ ಎಂದರೆ ಸರಿ. ಸದರಿ ಹನುಮಂತಪ್ಪ ಭಜಂತ್ರಿ ಯಾರು ಎಂದರೆ, ಅವರು ನನ್ನ ಶಿಷ್ಯರು ಮತ್ತು ನಮ್ಮ ಮಾವನವರ ಸ್ನೇಹಿತರು.

2014 ರಿಂದ ಅವರು ನನ್ನ ಶಿಷ್ಯರಾಗಿರುತ್ತಾರೆ. ನನ್ನ ಮತ್ತು ಸದರಿ ಹನುಮಂತಪ್ಪ ಭಜಂತ್ರಿ ರವರ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ನಾನು ಮತ್ತು ಅವರು ವ್ಯವಹಾರಗಳನ್ನು ಒಟ್ಟಿಗೆ ಮಾಡುತ್ತಿದ್ದೇವು ಎಂದರೆ ಸರಿ. ನನ್ನ ಊರು ಯಾವುದು ಎಂದರೆ, ಹಾನಗಲ್ ತಾಲೂಕಿನ ಬಿಂಗಾಪುರಾ ಎಂದು ನುಡಿಯುತ್ತಾರೆ. ನಾನು ಬಿಂಗಾಪುರದಲ್ಲಿ ಎಷ್ಟು ವರ್ಷ ಇದ್ದೆ ಎಂದರೆ, 2011 ರವರೆಗೆ ಅಲ್ಲಿದ್ದೆ ಮದುವೆಯಾದ ನಂತರ, ಇಲ್ಲಿಗೆ ಬಂದೆ ಎಂದು ನುಡಿಯುತ್ತಾರೆ. ದಿನಾಂಕಃ 03.02.2012 ರಲ್ಲಿ ಲಕ್ಷ್ಮೀಯವರನ್ನು ಮದುವೆಯಾಗಿರುತ್ತೇನೆ. ಯಾವಾಗಿನಿಂದ ನನ್ನ ಮತ್ತು ನನ್ನ ಹೆಂಡತಿಯ ನಡುವೆ ಕುಟುಂಬ ಕಲಹಗಳು ಉಂಟಾಗಿರುತ್ತವೆ ಎಂದರೆ, ಏಪ್ರೀಲ್ -2022 ರಲ್ಲಿ ಎಂದು ನುಡಿಯುತ್ತಾರೆ. ನಾನು ನನ್ನ ಹೆಂಡತಿಯನ್ನು ಬಿಟ್ಟು ಸುಮಾರು 3 ವರ್ಷಗಳಾಗಿವೆ. ನನ್ನ ಹೆಂಡತಿಯೊಂದಿಗೆ ಕಲಹವಾದ ನಂತರ, ನಾನು ನನ್ನ ತಂದೆ ತಾಯಿಯೊಂದಿಗೆ ನನ್ನ ಊರಿನಲ್ಲಿ ಉಳಿದು ಬಂದಿದ್ದೇನೆ. ನಾನು ಹನುಮಂತಪ್ಪ ಭಜಂತ್ರಿ ಇವರೊಂದಿಗೆ ವಾಸವಾಗಿದ್ದೆ ಎಂದರೆ ಇಲ್ಲ. ನನ್ನ ಮಾವ ಅವರು ಯಾವ ಯಾವ ವ್ಯವಹಾರವನ್ನು ಮಾಡುತ್ತಿದ್ದರು ಎನ್ನುವ ಬಗ್ಗೆ ನನ್ನೊಂದಿಗೆ ಚರ್ಚಿಸುತ್ತಿದ್ದರು.

ನಾನು ನನ್ನ ವೈಯಕ್ತಿಕ ವ್ಯವಹಾರವನ್ನು ನನ್ನ ಮಾವನವರಲ್ಲಿ ಹೇಳಿಕೊಳ್ಳುತ್ತಿದ್ದೇನೆ ಎಂದರೆ ಹೌದು, ಅವರು ನನ್ನ ಬಳಿ ನಾನು ಅವರ ಬಳಿ ಹೇಳಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ಹೆಂಡತಿ ನನ್ನ ವಿರುದ್ಧ ವಿವಾಹ ವಿಚ್ಛೇದನ ಮತ್ತು ಜೀವನಾಂಶ ಕೋರಿ ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ ಎಂದರೆ, ಹೌದು. ಸದರಿ ಜೀವನಾಂಶ ಪ್ರಕರಣ ಈ ನ್ಯಾಯಾಲಯದಲ್ಲಿ ಮತ್ತು ವಿವಾಹ ವಿಚ್ಛೇದನ ಪ್ರಕರಣ ಮೇಲಿನ ನ್ಯಾಯಾಲಯದಲ್ಲಿ ಬಾಕಿ ಇವೆ ಎಂದರೆ ಹೌದು. ನಾನು ಸದರಿ ಜೀವನಾಂಶ ಪ್ರಕರಣದಲ್ಲಿ ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆಯೇ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲಾತಿಗಳಲ್ಲಿ ಕೆಲವೊಂದು ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಶೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ರಶೀದಿಗಳು ಈ ಪ್ರಕರಣದ ಆರೋಪಿಯ ವ್ಯಾಪಾರ ಮಳಿಗೆಗೆ / ಅಂಗಡಿಗೆ ಸಂಬಂಧಿಸಿದ ರಶೀದಿಗಳಾಗಿರುತ್ತವೆ ಎಂದರೆ, ಸಾಕ್ಷಿಯು ನಾನು ವ್ಯವಹಾರ ಮಾಡಿದ್ದೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಈ ಪ್ರಕರಣದಲ್ಲಿ ಸಹಾಯ ಮಾಡುತ್ತೇನೆಂದು ಹೇಳಿ, ಸದರಿ ರಶೀದಿಗಳನ್ನು ಅವರಿಂದ ಪಡೆದುಕೊಂಡು, ಜೀವನಾಂಶ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಇಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತೇನೆಂದು ಅಶ್ವಾಸನೆ ಕೊಟ್ಟಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ನನ್ನ ಮಾವ ಮತ್ತು ಅವರ ನಡುವೆ ಆದ ವ್ಯವಹಾರದ ಬಗ್ಗೆ ನನಗೆ ತಿಳಿದ ಬಗ್ಗೆ ನುಡಿಯುತ್ತೇನೆ ಎಂದು ನುಡಿಯುತ್ತಾರೆ. ನಾನು

ಆರೋಪಿಯ ಬಳಿಯಿಂದ ರಶೀದಿಗಳನ್ನು ಪಡೆದುಕೊಂಡಿದ್ದರ ಸಲುವಾಗಿ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ, ನನಗೆ ವ್ಯವಹಾರ ಗೊತ್ತಿದ್ದ ಸಲುವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

ಯಾವಾಗ ಆರೋಪಿಯು ನಮ್ಮ ಮಾವನವರಿಗೆ ಮೂರು ಚೆಕ್ ಗಳನ್ನು ಕೊಟ್ಟಿದ್ದ ಎಂದರೆ, ಸಾಕ್ಷಿಯು 2019 ರಲ್ಲಿ ಸೊಸೈಟಿಯಲ್ಲಿ ಸಾಲ ಮಾಡುವ ಕಾಲಕ್ಕೆ ಎಂದು ನುಡಿಯುತ್ತಾರೆ. ಸದರಿ ಕಾಲಕ್ಕೆ ನಾನೇದಾರೂ ಅಲ್ಲಿ ಹಾಜರಿದ್ದೇನೆ ಎಂದರೆ, ಹಾಜರಿದ್ದೆ ಎಂದು ನುಡಿಯುತ್ತಾರೆ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆಯೇ ಎಂದರೆ, ನೀವು ಈಗ ಕೇಳಿದಾಗ , ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಚೆಕ್ ಗಳಲ್ಲಿ ಯಾವ ದಿನಾಂಕ, ತಿಂಗಳು ಮತ್ತು ಇಸ್ವಿ ನಮೂದಿಸಿದ್ದರು ಅಥವಾ ಅದರ ಬಗ್ಗೆ ನನಗೆ ತಿಳಿದಿದೆಯೇ ಎಂದರೆ , ಆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚೆಕ್ ಗಳಲ್ಲಿ ಎಷ್ಟು ಎಷ್ಟು ಮೊತ್ತವನ್ನು ನಮೂದಿಸಿದ್ದರು ಮತ್ತು ಅದರ ಬಗ್ಗೆ ನನಗೇನಾದರೂ ಗೊತ್ತೆ ಎಂದರೆ, ನನಗೆ ಗೊತ್ತಿಲ್ಲ. ಸದರಿ ಚೆಕ್ ಗಳನ್ನು ಸೊಸೈಟಿಯಲ್ಲಿ ನಮ್ಮ ಮಾವನವರ ಕೈಯಲ್ಲಿ ಕೊಟ್ಟಿದ್ದರು. 2019 ನೇ ಸಾಲಿನಲ್ಲಿ ಕೊಟ್ಟಿದ್ದರು, ನನಗೆ ದಿನಾಂಕ ನಿಖರವಾಗಿ ಗೊತ್ತಿಲ್ಲ. ಸದರಿ ಸಮಯಕ್ಕೆ ನನ್ನ ಮಾವನವರು ಸೊಸೈಟಿಗೆ ಪ್ರತಿನಿತ್ಯ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ನನ್ನ ಮಾವನವರು ಸೊಸೈಟಿಯಲ್ಲಿ ಏನೇನು ಬರೆಯುತ್ತಿದ್ದರು ಮತ್ತು ಏನನ್ನು ಇಡುತ್ತಿದ್ದರು ಎಂದು ನನಗೆ ಮೊದಲೇ ಹೇಳುತ್ತಿದ್ದರೇ ಎಂದರೆ, ಸಾಕ್ಷಿಯು ಕೆಲವೊಂದು ಹೇಳುತ್ತಿದ್ದರು, ಕೆಲವೊಂದು ಹೇಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನನ್ನ ಮಾವನವರು ಬಾಲ್ಯದಿಂದ ಸ್ನೇಹಿತರು. ಆರೋಪಿ ಕೊಟ್ಟಿದಂತಹ ಚೆಕ್ ಗಳು ದೈವಜ್ಞ ಬ್ಯಾಂಕಿನದ್ದು ಎಂದು ನುಡಿಯುತ್ತಾರೆ. ಸದರಿ ಚೆಕ್ ಗಳನ್ನು ಒಂದೇ ದಿನ ಕೊಟ್ಟಿದ್ದರು.

ನನ್ನ ಮಾವನವರು ಸೊಸೈಟಿಯಲ್ಲಿ ಯಾವಾಗ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ, 2019 ರಲ್ಲಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಸಾಲದ ಅರ್ಜಿ ವಜಾ ಆಗಿರುತ್ತದೆ ಎಂದರೆ, ನನಗೆ ನೆನಪಿಲ್ಲ. ನನ್ನ ಮಾವನವರು ಸಾಲದ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ನಾನು ಅವರೊಂದಿಗೆ ಹೋಗಿದ್ದೇನೆ ಎಂದರೆ, ಆವತ್ತು ಹೋಗಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ದೈವಜ್ಞ ಸೊಸೈಟಿ ಮುಂಡಗೋಡಿನ ಬಂಕಾಪುರ ರೋಡನಲ್ಲಿದೆ. ನನ್ನ ಪೌರೋಹಿತೆ ಕೆಲಸದಲ್ಲಿ ನಾನು ತುಂಬಾ ಬ್ಯೂಸಿ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಪೌರೋಹಿತೆ ಕೆಲಸದಲ್ಲಿ ನಾನು ಓಡಾಡುತ್ತಿರುತ್ತೇನೆ ಎಂದರೆ, ಕಾರ್ಯಕ್ರಮ ಇರುವಾಗ ಓಡಾಡುತ್ತೇನೆ ಎಂದು ನುಡಿಯುತ್ತಾರೆ. ನಾನು ತುಂಬಾ ದೂರದ ಪ್ರದೇಶಗಳಿಗೆ ಹೋಗುತ್ತೇನೆ ಎಂದರೆ, ನನ್ನ ಆರೋಗ್ಯ ಸರಿ ಇಲ್ಲದೇ ಇರುವ ನಂತರ, ಬಹಳ ದೂರ ಓಡಾಡುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಒತ್ತಡದ ಕೆಲಸದಲ್ಲಿ ನಾನು ಜೀವನಾಂಶ ಮತ್ತು ವಿವಾಹ ವಿಚ್ಛೇದನ ಪ್ರಕರಣದಲ್ಲಿ ಸರಿಯಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದು ಇರುವುದಿಲ್ಲ ಎಂದರೆ, ಹಾಜರಾಗಿದ್ದೇನೆ ಎಂದು ನುಡಿಯುತ್ತಾರೆ. ನನಗೆ ನನ್ನ ಕೆಲಸದ ಒತ್ತಡದಿಂದ ಹಾಜರಾಗಲು ಆಗಿರುವುದಿಲ್ಲವೆಂದು, ನನಗೆ ನನ್ನ ಕೆಲಸದ ಒತ್ತಡದ ಕಾರಣ ಹೇಳಿ ನ್ಯಾಯಾಲಯಕ್ಕೆ ಹಾಜರಾಗಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅನಾರೋಗ್ಯ ಉಂಟಾಗಿತ್ತು ಎಂದರೆ ಸರಿ. ಸದರಿ ಸಮಯಕ್ಕೆ ನನ್ನ ಮಾವನವರು ಸಾಕಷ್ಟು ಖರ್ಚು ವೆಚ್ಚಗಳನ್ನು ಮಾಡಿದ್ದಾರೆ ಎಂದರೆ, ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನನ್ನು ನನ್ನ ಮಾವನವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮಾವನವರಿಗೆ ಆರ್ಥಿಕ ಸಹಾಯ ಮಾಡಿದ್ದು ಇರುವುದಿಲ್ಲ. ನನ್ನ ಮಾವನವರು ತೀರಿಕೊಂಡಾಗ ನಾನು ಬಂದಿದ್ದೆನು. ಯಾವ ಕಾರಣಕ್ಕಾಗಿ ನನ್ನ ಮಾವನವರು ಸೊಸೈಟಿಯಲ್ಲಿ ಸಾಲದ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ, ಅವರಿಗೆ ಸೊಸೈಟಿಯಲ್ಲಿ ಸ್ವಲ್ಪ ಸಮಸ್ಯ ಆಗಿ ಅವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅವರಿಗೆ ಹಣದ ಅಭಾವ ಉಂಟಾಗಿ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ನನ್ನ ಹೆಂಡತಿಯ ಮೇಲಿನ ಸಿಟ್ಟಿನಿಂದ ಮತ್ತು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ತಮಗೆ ಎಷ್ಟು ವೇತನವಿತ್ತು ಎಂದು ನನ್ನಲ್ಲಿ ಹೇಳಿದ್ದರೇ

ಎಂದರೆ, ಸಾಕ್ಷಿಯು ಮ್ಯಾನೇಜರ್ ಇದ್ದೆ ತಿಂಗಳಿಗೆ ಸುಮಾರು 30,000/- ಸಂಬಳ ಬರುತ್ತದೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ನನ್ನ ಮಾವ ಯಾವ ಬ್ಯಾಂಕಿನ ಖಾತೆಯಲ್ಲಿ ಎಷ್ಟು ಉಳಿತಾಯ ಮಾಡಿರುತ್ತಾರೆ ಎಂದು ನನಗೆ ಹೇಳಿರುತ್ತಾರೆಯೇ ಎಂದರೆ, ಆ ಬಗ್ಗೆ ಹೇಳಿರುವುದಿಲ್ಲ , ಅವರ ಸಾಲವೇ ಬಹಳವಿತ್ತು ಎಂದು ನುಡಿಯುತ್ತಾರೆ. ಯಾವ ಬ್ಯಾಂಕಿನಲ್ಲಿ ಎಷ್ಟು ಸಾಲ ಮಾಡಿದ್ದರು ಎಂದು ಹೇಳಿದ್ದು ಇರುವುದಿಲ್ಲ. ಆವರಿಗೆ ಆಸ್ತಿ ಎಷ್ಟು ಇತ್ತು ಎನ್ನುದನ್ನೂ ಸಹ ಹೇಳಿದ್ದು ಇರುವುದಿಲ್ಲ.

ನನ್ನ ಮದುವೆಯಾದ ಸ್ವಲ್ಪ ದಿನಗಳ ನಂತರ, ನನ್ನ ಮತ್ತು ನನ್ನ ಮಾವನವರ ನಡುವೆ ಸರಿ ಇರಲಿಲ್ಲ ಎಂದರೆ, ಸರಿ ಇತ್ತು ಎಂದು ನುಡಿಯುತ್ತಾರೆ. ನಾನು ವಿನಾಃ ಕಾರಣ ನನ್ನ ಮಾವನವರಿಗೆ ಮತ್ತು ನನ್ನ ಹೆಂಡತಿ ಮಕ್ಕಳಿಗೆ ಹಣದ ವಿಷಯವಾಗಿ ತೊಂದರೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಹೆಂಡತಿಯ ಜೀವನ ಸರಿಯಾಗಲೆಂದು ನನ್ನ ಅತ್ತೆಯವರು ನನ್ನನ್ನು ಕರೆದುಕೊಂಡು ಹೋಗಿ ಜಾಗವನ್ನು ಕೊಟ್ಟು, ನಿವೇಶನ ಕಟ್ಟಿಕೊಟ್ಟಿರುತ್ತಾರೆ ಎಂದರೆ, ನನ್ನ ಮಾವನವರು ಸೈಟ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆದರೂ ಸಹ ನಾನು ನನ್ನ ಮಾವನರಿಗೆ ತೊಂದರೆ ಕೊಡುವ ಚಾಳಿ ಮುಂದುವರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಆ ಸಿಟ್ಟಿನಿಂದ ನಾನು ಇಂದೂ ಆರೋಪಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಎಷ್ಟು ಚೆಕ್ ನ ಪ್ರಕರಣಗಳು ದಾಖಲಾಗಿವೆ ಎಂದು ನನಗೆ ಗೊತ್ತು. ನನ್ನ ಹೆಂಡತಿಯ ಮನೆಯವರು ಎಷ್ಟು ಚೆಕ್ ನ ಮತ್ತು ಎಷ್ಟು ಮೊತ್ತದ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ತಿಳಿದಿದೆಯೇ ಎಂದರೆ, ನನಗೆ ಗೊತ್ತಿಲ್ಲ.

ನನಗೆ ಆರೋಪಿಯು 2012 ರಿಂದ ಪರಿಚಯ. ಆರೋಪಿ ನನಗೆ ಹೇಗೆ ಪರಿಚಯ ಎಂದರೆ, ಅವರು ನನ್ನ ಮಾವನವರೊಂದಿಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯೂ ಸಹ ನನ್ನ ದಾಂಪತ್ಯ ಕಲಹ ಪಂಚಾಯಿತಿಯಲ್ಲಿ ಭಾಗಿಯಾಗಿರಲಿಲ್ಲ. ಹನುಮಂತಪ್ಪನವರು ಭಾಗಿಯಾಗಿದ್ದರು.

ನನ್ನ ಮಾವನವರು ಮರಣ ಹೊಂದುವ ಎಷ್ಟು ದಿನಗಳ ಪೂರ್ವದಲ್ಲಿ ಚೆಕ್ ಗಳನ್ನು ಸೊಸೈಟಿಯಲ್ಲಿಟ್ಟಿದ್ದರು ಎಂದರೆ, ನನಗೆ ತಾರೀಖ ಗೊತ್ತಿಲ್ಲ. ಸೊಸೈಟಿಯಲ್ಲಿ ನನ್ನ ಮಾವನವರು ಏನೇನು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ನನ್ನ ಮಾವನವರ ಬಳಿ ಸಾಲ ಪಡೆಯುತ್ತಿದ್ದನು.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳಿಗೆ ಸಂಬಂಧಿಸಿದಂತೆ ನನ್ನ ಮೌಖಿಕ ಹೇಳಿಕೆ ಬಿಟ್ಟರೇ ನನ್ನ ಬಳಿ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ಆರೋಪಿ ಮಾತಿನ ಮೇರೆಗೆ ನಾನು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದರೆ ಸರಿ . ನನ್ನ ಮಾವನವರಿಗೆ 3 ಜನ ಹೆಣ್ಣು ಮಕ್ಕಳು. ಸದರಿ 3 ಜನರು ಯಾವ ಯಾವ ಹುದ್ದೆಯಲ್ಲಿದ್ದಾರೆಂದು ನನಗೆ ತಿಳಿದಿದೆಯೇ ಎಂದರೆ, ಅವರು ಮನೆ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೆಣ್ಣು ಮಕ್ಕಳಲ್ಲಿ ಒಬ್ಬರು ಸರ್ಕಾರಿ ನೌಕರಿಯಲ್ಲಿದ್ದಾರೆ ಎಂದರೆ, ಸಾಕ್ಷಿಯು ನಮ್ಮ ಮಾವನವರಿಗೆ 3 ಜನ ಹೆಣ್ಣು ಮಕ್ಕಳು, ಅವರನ್ನು ಹೊರತುಪಡಿಸಿ, ಒಬ್ಬ ಮಗಳನ್ನು ಸಾಕು ಮಗಳನ್ನಾಗಿ ನೋಡಿಕೊಂಡಿದ್ದು, ಅವರ ಸಾಕು ಮಗಳು ನೌಕರಿಯಲ್ಲಿದ್ದಾಳೆ. ಸದರಿ ವಿಷಯ ನಾನು ಮತ್ತು ಆರೋಪಿ ತಿಳಿದುಕೊಂಡಿರುತ್ತೇವೆ ಎಂದರೆ ಸರಿ. ಅವರಿಗೆ ಸರ್ಕಾರಿ ಸಂಬಳ ಬರುವ ವಿಷಯ ನನಗೆ ಮತ್ತು ಆರೋಪಿಗೆ ತಿಳಿದಿದೆಯೇ ಎಂದರೆ, ಆರೋಪಿಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನ ಮಾವನವರ ಹೆಣ್ಣು ಮಕ್ಕಳೊಂದಿಗೆ ಮಾಡಿಕೊಂಡಿ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಆರೋಪಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ನನಗೆ ಈ  ಪ್ರಕರಣದ ಬಗ್ಗೆ  ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ನನ್ನ ಮೃತ ಮಾವ ಮತ್ತು ಅವರ ಹೆಣ್ಣು ಮಕ್ಕಳೊಂದಿಗೆ  ದ್ವೇಷ ಸಾಧಿಸುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ.ದ ನ್ಯಾದಂ ಮುಂಡಗೋಡ.**